| | | |
|---|---|---|
| OS | 55/2025 | ಪಿ.ಡಬ್ಲ್ಯೂ: 1 |

ಇಂದು ದಿ: 21.06.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆ: ವಾದಿಪರ ವಕೀಲರಿಂದ:

ನಾನು ನನ್ನ ಪ್ರಕರಣದ ಸಮರ್ಥನೆಗಾಗಿ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿದ್ದು, ಅವುಗಳನ್ನು ಈ ಕೆಳಗಿನಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿ ಪಿ 4 | 27.11.2017ರಂದು ನಂಜನಗೂಡು ಶ್ರೀಕಂಠೇಶ್ವರ ದೇವಸ್ಥಾನದಲ್ಲಿ ಕೊಟ್ಟ ಹಿಂಬರಹ |
| ನಿ ಪಿ 5 | ಅರ್ಜಿಯ ದೃಢೀಕೃತ ನಕಲು |

ಪಾಟೀ ಸವಾಲಿಗೆ ಸಮಯ ಕೇಳಿದ್ದು ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-
ಹಿರಿಯ ಸಿವಿಲ್
ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ನಂಜನಗೂಡು.

ಇಂದು ದಿಃ 21.06.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ KTR ವಕೀಲರಿಂದಃ

ನಾನು ಎಸ್ ಎಸ್ ಎಲ್ ಸಿ ವರೆಗೆ ಒದಿದ್ದೇನೆ. ನಾನು ಸಹಿಯನ್ನ ಇಂಗ್ಲೀಷಿನಲ್ಲಿ ಮಾಡುತ್ತೇನೆ ಆದರೆ ಓದಲು ಬರುವುದಿಲ್ಲ. ನನ್ನ ತಂದೆಗೆ 5-6 ತಿಂಗಳಿನಿಂದ ಆರೋಗ್ಯ ಸಮಸ್ಯೇ ಇದ್ದು ಅವರಿಗೆ ನಡೆದಾಡಲು ಆಗುವುದಿಲ್ಲ ಮತ್ತು ಕಣ್ಣು ಕಾಣುವುದಿಲ್ಲ. ಅದನ್ನು ಬಿಟ್ಟರೆ ಅವರಿಗೆ ತಿಳುವಳಿಕೆ ಇದೆ. ಈ ಪ್ರಕರಣದ ವಿವರ ಗೊತ್ತು. ದಾವಯಲ್ಲಿ ನನ್ನ ತಂದೆ ದಾವಾ ವಿವರಗಳನ್ನು ನನಗೆ ಹೇಳಿದ್ದಾರೆ. ನನ್ನ ತಂದೆ ಕಟಕಟೆಗೆ ಬಂದ ಬಗ್ಗೆ ನನಗೆ ಗೊತ್ತಿಲ್ಲ ಮತ್ತು ದಾವೆಯನ್ನು ನೋಡಿ ತಿಳಿದುಕೊಳ್ಳಲು ಪ್ರಯತ್ನ ಪಟ್ಟಿಲ್ಲ.

ನನ್ನ ತಂದೆ ಸಲ್ಲಿಸಿದ ದಾವಾ ದಾಖಲೆಗಳನ್ನು ನೋಡಿದ್ದೇನೆ. ನಿ ಪಿ 7 ಅನ್ನು ನಾನು ಓದಿ ತಿಳಿದುಕೊಂಡಿದ್ದೆನಾ ಎಂದರೆ ಓದಿಲ್ಲ. ನಿ ಪಿ 7 ರಲ್ಲಿ ಬರೆದ ವಿಚಾರ ನನಗೆ ಗೊತ್ತು. ನಿ ಪಿ 7 ಅನ್ನು ಸೋಮಚಾರಿಯವರು ನಿಂಗಣ್ಣನವರಿಗೆ ಭೋಗ್ಯ ಮಾಡಿದ ಪತ್ರ ಎಂದು ತಿಳಿದುಕೊಂಡಿದ್ದೇನೆ. ನನಗೆ ಈಗ 35 ವರ್ಷ. ನನ್ನ ತಂದೆ ಸಹಿ ಮಾಡುತ್ತಿದ್ದರು ಆದರೆ ಅವರು ಶಾಲೇಗೆ ಹೋಗಿಲ್ಲ. ನಾನು ಮೊದಲ ಬಾರಿ 2017ರಲ್ಲಿ ದಾಖಲೆಗಳನ್ನು ನೋಡಿದ್ದೆ. ಅದರ ಮೊದಲು ನೋಡಿಲ್ಲ. ಆ ಪತ್ರಗಳನ್ನು ನನ್ನ ತಂದೆ ತೋರಿಸಿದ್ದರು. ಆ ಪೂರ್ವದಲ್ಲಿ ಪತ್ರ ನಮ್ಮಮನೆಯಲ್ಲಿತ್ತು, ಅದನ್ನು ನಾನಾಗಲೀ ನನ್ನತಂದೆಯಾಗಲೀ ಓದಿ ತಿಳಿದುಕೊಂಡಿಲ್ಲ. ಅದನ್ನು ಓದಿಸಿ ತಿಳಿದುಕೊಳ್ಳಲು ತೊಂದರೆ ಇರಲಿಲ್ಲ.

ನಿ ಪಿ 3ರ ಆರ್ ಟಿ ಸಿ ಯನ್ನು ತಿಳಿದಿದ್ದೇನೆ, ಅದರಲ್ಲಿ 5 ಎ 21 ಗುಂ ವಿಸ್ತೀರ್ಣ 9 ಗುಂ ಖರಾಬು, 5 ಎ 12 ಗುಂ ಹಿಡುವಳಿ ಜಮೀನು ಎಂದರೆ ಸರಿ. ಆರ್ ಿಟಿ ಸಿ ಯಲ್ಲಿ ಇದ್ದ ಹಾಗೆ ನಿ ಪಿ 5ರ ಕ್ರಯಪತ್ರದಲಿ ಒಕ್ಕಣೆಯಲ್ಲಿ ಬರೆದಿದ್ದಾರೆ ಎಂದರೆ ಸರಿ. ನನ್ನ ತಂದೆ ಹೇಳಿ ಬರೆಸಿದ್ದರು ಎಂದರೆ ಸರಿ. ನಿ ಪಿ 6 ರ ಕ್ರಯಪತ್ರದಲ್ಲೂ ಸಹ ಸರ್ವೆ ನಂಬರ್ 611 ರ 5 ಎ 21 ಗುಂ ಜಮೀನಿನಲ್ಲಿ ಹಿಡುವಳಿ 5 ಎ 12 ಗುಂ ಇದ್ದು ಅದರಲ್ಲಿ 1 ಎ 7 ಗುಂಟೆ ಯನ್ನು ಕಾಳಿಂಗಪ್ಪನವರಿಂದ ನನ್ನತಂದೆ ಖರೀದಿಸಿದ್ದಾರೆ ಎಂದು ಬರೆಯಲಾಗಿದೆ ಎಂದರೆ ಸರಿ. ನನಗೆ ಅಧಿಕಾರ ಪತ್ರ ಕೊಡುವ ಮೊದಲು ನನ್ನ ತಂದೆ ಪಾಟೀ ಸವಾಲಿಗೆ ಒಳಪಟ್ಟು ಕೆಲ ವಿಷಯಗಳಿಗೆ ಅವರು ಸಮ್ಮತಿ ಕೊಟ್ಟಿರು ಎಂದರೆ ಸರಿಯಲ್ಲ. ನನ್ನ ತಂದೆ ಸಮ್ಮತಿ ಕೊಟ್ಟ ನಂತರ ಪ್ರಕರಣಕ್ಕ ತೊಂದರೆ ಆಗಬಹುದು ಎಂದು ನಾನು ಮತ್ತು ನನ್ನ ತಂದೆ ಮಾತನಾಡಿ ಅನಾರೋಗ್ಯ ಎಂದು ನನಗೆ

ಅಧಿಕಾರ ಕೊಟ್ಟರು ಎಂದರೆ ಅವರಿಗೆ ಆರೋಗ್ಯ ಸರಿಯಿಲ್ಲದ ಕಾರಣ ಕೊಟ್ಟರು ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ತಂದೆಗೆ ಮಂಡಿ ನೋವು ಮತ್ತು ಕಣ್ಣು ಕಾಣುವುದಿಲ್ಲ ಎಂಬ ಬಗ್ಗೆ ದಾಖಲೆ ಇಲ್ಲ. ನನ್ನ ತಂದೆ ಆರೋಗ್ಯವಾಗಿದ್ದು ದಾವೆಗೆ ತೊಂದರೆ ಆಗಬಹುದು ಎಂದು ಆರೋಗ್ಯ ಸರಿಯಿಲ್ಲ ಎಂದು ಅಧಿಕಾರ ಪತ್ರ ಕೊಟ್ಟರು ಎಂದರೆ ಸರಿಯಲ್ಲ.

ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.

ಇಂದು ದಿಃ 21.06.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ SU ವಕೀಲರಿಂದಃ

ದಾವಾ ಸರ್ವೆ ನಂಬರ್ 101/3 ನಲ್ಲಿ 2 ಎ 3 ಗುಂಟೆ ಆಸ್ತಿ ಇದೆ . ಈ ಸರ್ವೆ ನಂಬರ್ ಆಸ್ತಿ ನನ್ನದು. ನನಗೆ ಆಸ್ತಿ ನನ್ನ ತಂದೆ ಯಿಂದ ಬಂತು. ಮಾದಮ್ಮ ಅಂದರೆ 1ನೇ ಪ್ರತಿವಾದಿ ನನ್ನ ಹೆಂಡತಿ. ಮಾದಮ್ಮ ಮತ್ತು ನಾನು ಈಗ ಒಟ್ಟಿಗೆ ಇಲ್ಲ 10 ವರ್ಷಗಳಿಂದ ಬೇರೆ ಇದ್ದೇವೆ. ನಮಗೆ ಪಾರ್ವತಿ ಎಂಬ ಮಗಳು ಇದ್ದಳು ಅವರು ತೀರಿಹೋಗಿರುತ್ತಾಳೆ. ನನ್ನ ಅಳಿಯ ಬದುಕಿದ್ದಾರೆ ಆದರೆ ನನ್ನಮಗಳು ಪಾರ್ವತಿಗೆ ಮಕ್ಕಳು ಇಲ್ಲ. 2ನೇ ವಾದಿ ನನ್ನ ಮಗ. 2ನೇ ವಾದಿ ನನ್ನ2ನೇ ಹೆಂಡತಿ ರತ್ನಮ್ಮ ನ ಮಗ. ರತ್ನಮ್ಮನ ಜೊತೆ ನನ್ನ ಮದುವೆ ಅಂದಾಜು 30 ವರ್ಷಗಳ ಹಿಂದೆ ಆಗಿತ್ತು. ನಾವೆಲ್ಲರೂ ಒಟ್ಟಿಗೆ ಇದ್ದು 10 ವರ್ಷಗಳ ನಂತರ ಮಾದಮ್ಮ ಬದಲಾವಣೆ ಆದರು. ಮಾದಮ್ಮ, ರತ್ನಮ್ಮ ಮತ್ತು ನಾನು ಎಲ್ಲರೂ ಒಟ್ಟಿಗೆ ಇದ್ದೆವು. ದಾವಾ ಆಸ್ತಿ ಬಿಟ್ಟು ಬೇರೆ ಆಸ್ತಿ ನನ್ನ ತಂದೆಯಿಂದ ನನಗೆ ಬಂದಿಲ್ಲ.

ನಾನು ರತ್ನಮ್ಮನ ಜೊತೆ 2ನೇ ಮದುವೆ ಆದ ಬಗ್ಗೆ ದಾಖಲೆ ಇದೆ. 2ನೇ ವಾದಿ ನನ್ನ ಮಗ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಮಾಡಿಲ್ಲ. ದಾವಾ ಆಸ್ತಿ ನನ್ನಹೆಸರಿನಲ್ಲಿ ಖಾತೆ ಇದೆ. ಆ ನಂತರ ಮಾದಮ್ಮನ ಹೆಸರಿಗೆ ಖಾತೆ ಆಯಿತು. ಮಾದಮ್ಮನ ಹೆಸರಿಗೆ ಖಾತೆ ಆದ ಬಗ್ಗೆ ನನಗೆ ಗೊತ್ತಿಲ್ಲ. ಮಾದಮ್ಮನ ಹೆಸರಿಗೆ ಖಾತೆ ಆದಾಗ ಅವರು ಅವರ ಊರಾದ ಗೋಳೂರಿನಲ್ಲಿ ಇದ್ದರು. ಮಾದಮ್ಮ ನನ್ನ ಜೊತೆ ಬೇರೆ ಆಗಿ ಹೋಗಿದ್ದರು. ರತ್ನಮ್ಮನನ್ನು ಮದುವೆ ಆದಾಗ ಮಾದಮ್ಮನಿಗೆ ವಿಚ್ಛೇಧನ ಕೊಟ್ಟಿಲ್ಲ. ಮಾದಮ್ಮ ನವರೇ ವ್ಯವಸಾಯ ಮಾಡಿಸುತ್ತಿದ್ದರು ಎಂದರೆ ನಾನೇ ಮಾಡುತ್ತಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ. ಮಾದಮ್ಮನವರು ಅವರ ಊರಿಗೆ ಬಂದಾಗ ಅವರ ಜೀವನಾಂಶಕ್ಕೆ ಎಂದು ಏನನ್ನು ಕೊಟ್ಟಿಲ್ಲ. ಮಾದಮ್ಮನಿಗೆ ಈಗ 60 ವರ್ಷ ಆಗಿರಬಹುದು. ಮಾದಮ್ಮನಿಗೆ ಮಕ್ಕಳು ಇಲ್ಲ ಅವರು ಒಬ್ಬರೇ ಇದ್ದಾರೆ ಎಂದರೆ ಸರಿ. ಮಾದಮ್ಮನಿಗೆ ಖಾತೆ ಆದ ಬಗ್ಗೆ ನನಗೆ ಮೊದಲೇ ಗೊತ್ತಿತ್ತು ಎಂದರೆ ಸರಿಯಲ್ಲ. ಮಾದಮ್ಮನಿಗೆ ಖಾತೆ ಆದ ಬಗ್ಗೆ ಅರ್ಜಿ ಸಲ್ಲಿಸಿದ್ದೆ ಆದರೆ ಅದನ್ನು ತೆಗೆದುಕೊಂಡಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಒ ಎಸ್ 87/2020 ಅನ್ನು ನಂಜನಗೂಡು ನ್ಯಾಯಾಲಯದಲ್ಲಿ ಸಲ್ಲಿಸಿದ್ದು ಅದು ವಜಾ ಆಯಿತು ಎಂದರೆ ಸರಿ. ಆ ದಾವೆ ವಜಾ ಆಗುವ ಮೊದಲೇ ಈ ಪ್ರಕರಣ ದಾಖಲು ಮಾಡಿದ್ದೆ ಎಂದರೆ ಸರಿ.

ಈದಾವೆಯಲ್ಲಿ ಆ ಪ್ರಕರಣದ ಬಗ್ಗೆ ಹೇಳಿಲ್ಲ ಎಂದರೆ ಸರಿ. ಒ ಎಸ್ 87/2020 ಅನ್ನು ಇದೇ ಆಸ್ತಿಯ ಮೇಲೆ ದಾಖಲಿಸಿದ್ದೆ. ಅಂದರೆ ಒಟ್ಟಿಗೆ 2 ಪ್ರಕರಣ ದಾಖಲಿಸಿದ್ದೆ ಎಂದರೆ ಸರಿ. 1ನೇ ಪ್ರತಿವಾದಿ ಮತ್ತು ನನ್ನ ನಡುವೆ ಊರಲ್ಲಿ ಪಂಚಾಯಿತಿ ಮಾಡಿ ಬೇರೆ ಮಾಡಿಲ್ಲ ಅವರಷ್ಟಕ್ಕೆ ಅವರೇ ಬಂದು ಬಿಟ್ಟರು ಎಂದು ಸಾಕ್ಷಿ ನುಡಿಯುತ್ತಾರೆ. ಸರ್ವೆ ನಂಬರ್ 101 ಸಿಂಧುವಳ್ಳಿ ಪುರದಲ್ಲಿ ಇದ್ದು ನಾನು ಅದೇ ಊರಿನಲ್ಲಿ ವಾಸವಿದ್ದೇನೆ. ಸಿಂಧುವಳ್ಳಿ ಪುರ ಗ್ರಾಮದಲ್ಲಿ ನಾನು 1994-95 ರಲ್ಲಿ ಅಲ್ಲೇ ವಾಸವಿದೆ ಎಂದರೆ ಸರಿ. ಮಾದಮ್ಮ ನವರಿಗೆ ಎಂ ಆರ್ 9/1993-94 ರ ಆಧಾರದಲ್ಲಿ ಖಾತೆ ಆಗಿದೆ ಎಂದರೆ ಸರಿ.

ನಾನು ರತ್ನಮ್ಮನವರನ್ನು ಮದುವೆ ಆದಾಗ ಮಾದಮ್ಮನವರ ಜೀವನಾಂಶಕ್ಕೆ ಎಂದು ಕೊಟ್ಟಿದ್ದೆ ಎಂದರೆ ಸರಿಯಲ್ಲ. ನಾನು ಪಂಚಾಯಿತಿದಾರರ ಸಮಕ್ಷಮ ಮಾದಮ್ಮನವರಿಗೆ ಮಕ್ಕಳಿಲ್ಲದ ಕಾರಣ ಊರಿನಲ್ಲಿ ಮಾತುಕತೆ ಆಗಿ ನಾನೇ ಖಾತೆ ಮಾಡಿಸಿಕೊಟ್ಟೆ ಎಂದರೆ ಖಾತೆ ಮಾಡಿಕೊಟ್ಟಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ. 1993-94ರಿಂದಲೂ ಮಾದಮ್ಮನವರೇ ಸ್ವಾಧೀನದಲ್ಲಿದ್ದರು. ನಾನು ಮಾದಮ್ಮನವರಿಗೆ ಜೀವನಾಂಶಕ್ಕಾಗಿ ಕೊಟ್ಟ ಕಾರಣ ಅದು ಅವರ ಸ್ವಂತ ಆಸ್ತಿ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನನಗಾಗಲೀ ಬೇರೆಯವರಿಗಾಗಲಿ ಮಾದಮ್ಮನ ಹೊರತಾಗಿ ಹಕ್ಕು ಇಲ್ಲ ಎಂದರೆ ನಾನು ಅವರಿಗೆ ಖಾತೆ ಮಾಡಿಕೊಡದ ಕಾರಣ ಅವರಿಗೆ ಹ ಕ್ಕು ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಮಾದಮ್ಮನಿಗೆ ವಯಸ್ಸಾದ ಕಾರಣ ಅವರ ಜೀವನ ನಿರ್ವಹಣೆಗಾಗಿ 2ನೇ ಪ್ರತಿವಾದಿಯಿಂದ 10.38 ಲಕ್ಷ ಹಣ ಪಡೆದು ದಿಃ17.03.2017ರಂದು ಅಧಿಕಾರ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ಜಿ ಪಿ ಎ ಆಧಾರದಲ್ಲಿ 2ನೇ ಪ್ರತಿವಾದಿ 06.03.2020 ರಂತೆ ಕ್ರಯ ಮಾಡಿಕೊಂಡಿದ್ದಾರೆ ಎಂದರೆ ಈಗ ಮಾಡಿಕೊಂಡಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಈಗ 2ನೇ ಪ್ರತಿವಾದಿ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸುಳ್ಳು ನಾನೇ ಮಾಡುತ್ತಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. 1ನೇ ಪ್ರತಿವಾದಿ 2ನೇ ಪ್ರತಿವಾದಿಗೆ ಜಿ ಪಿ ಎ ಬರೆದುಕೊಟ್ಟ ಕಾರಣ ಅದನ್ನು ಪ್ರಶ್ನಿಸುವ ಹಕ್ಕು ಯಾರಿಗೂ ಇಲ್ಲ ಎ ಂದರೆ ಸರಿಯಲ್ಲ. ಈಗ ಜಮೀನಿನ ಬೆಲೆ ಹೆಚ್ಚಾದ ಕಾರಣ ಸುಳ್ಳು ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.

ಇಂದು ದಿಃ 21.06.2025ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ SU ವಕೀಲರಿಂದಃ

ನಾನು ದಾವೆಯನ್ನು ಸರ್ವೆ ನಂಬರ್ 254, 445, 448 ಆಸ್ತಿಗಳಿಗೆ ದಾಖಲಿಸಿದ್ದೇನೆ. ಈ ಎಲ್ಲಾ ಆಸ್ತಿಗಳು ಹೊಸಕೋಟೆ ಗ್ರಾಮದಲ್ಲಿವೆ. ನಾನು ಹೊಸಕೋಟೆ ಗ್ರಾಮದಲ್ಲಿ ವಾಸವಿದ್ದೇನೆ. ದಾವ ಆಸ್ತಿಗಳು ನನ್ನ ತಾತನಾದ ಪುಟ್ಟನಂಜಪ್ಪನ ಆಸ್ತಿಗಳು. ನನ್ನ ತಾತನಿಗೆ ಒಬ್ಬನೇ ಮಗ ಅವರ ಹೆಸರು ಸೋಮಣ್ಣ. ಸೋಮಣ್ಣನಿಗೆ 5 ಜನ ಮಕ್ಕಳು, ಅವರೆಂದರೆ ನಾನು, ರತ್ನಮ್ಮ, ಗೀತ, ಪಾರ್ವತಿ, ಮಂಗಳಮ್ಮ. ನಾವೆಲ್ಲರೂ ವಿಭಾಗ ಮಾಡಿಕೊಂಡಿಲ್ಲ. ದಾವೆಯಲ್ಲಿ ನನ್ನ ಅಕ್ಕತಂಗಿಯರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನನ್ನ ಅಕ್ಕತಂಗಿಯರನ್ನು ಪಕ್ಷಗಾರರನ್ನಾಗಿ ಮಾಡದ ಕಾರಣ ಈ ದಾವೆ ವಜಾ ಆಗಬೇಕು ಎಂದರೆ ಸರಿಯಲ್ಲ.

ದಾವೆಯ 1ನೇ ಆಸ್ತಿ ನನ್ನ ತಾತನ ಆಸ್ತಿ. ಸರ್ವೆ ನಂಬರ್ 448ರ ಖಾತೆ ಈಗ ನನ್ನ ಹೆಸರಿನಲ್ಲಿದೆ. ಸರ್ವೆ ನಂಬರ್ 445ರ ಆಸ್ತಿ ಈಗ ನನ್ನ ಹೆಸರಿನಲ್ಲಿದೆ. 254ರ ಆಸ್ತಿಕೂಡಾ ನನ್ನ ತಾತನ ಹೆಸರಿನಲ್ಲಿದ್ದು ಈಗ ಮಾದಪ್ಪ ಎನ್ನುವವರು ಮಾಡಿಸಿಕೊಂಡಿದ್ದಾರೆ. 1 ಮತ್ತು 2ನೇ ಆಸ್ತಿ ನನ್ನಹೆಸರಿನಲ್ಲಿದ್ದರೂ ಕೂಡಾ ಈ ದಾವೆಯಲ್ಲಿ ಆ ಎರಡು ಆಸ್ತಿಗಳನ್ನು ಏಕೆ ಸೇರಿಸಿದ್ದೇನೆ ಎಂದರೆ ಆಸ್ತಿಗಳು ನನ್ನದು ಎಂದು ಕೇಳಿ ದಾವೆ ಸಲ್ಲಿಸಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಈ ದಾವಾ ಪೂರ್ವದಲ್ಲಿ ನಾನು ಪ್ರತಿವಾದಿಗಳ ವಿರುದ್ದ ದಾವೆ ಸಲ್ಲಿಸಿದ್ದೇನಾ ಎಂದರೆ ಇಲ್ಲ.

ನಾನು ಮೈಸೂರಿನ ಎ ಸಿ ನ್ಯಾಯಾಲಯಕ್ಕೆ 1ನೇ ಆಸ್ತಿಯನ್ನು ಖಾತೆ ಮಾಡಿಕೊಡಿ ಎಂದು ಅರ್ಜಿ ಸಲ್ಲಿಸಿದ್ದೆ, ಆ ಅರ್ಜಿ ಸಿವಿಲ್ ನ್ಯಾಯಾಲಯದಲ್ಲಿ ಮಾಡಿಕೊಳ್ಳಿ ಎಂದು ಅರ್ಜಿ ವಜಾ ಆಯಿತು. 1ನೇ ಅನುಕ್ರಮ ಆಸ್ತಿಯಲ್ಲಿ 1 ಎ 22 ಗುಂಟೆ ಆಸ್ತಿ ಇದೆ. ನಿ ಪಿ 8ರ ಪ್ರಕಾರ ಸರ್ವೆ ನಂಬರ್ 448 ಗುರುಮಲ್ಲಪ್ಪನವರ ಹೆಸರಿನಲ್ಲಿದೆ ಎಂದರೆ ಸರಿ. ಮಾದಪ್ಪನವರ ಹೆಸರಿನಲ್ಲಿ 26 ಗುಂಟೆ ಇದೆ ಎಂದರೆ ಸರಿ, ಮಾದಪ್ಪ ಪ್ರತಿವಾದಿಯ ತಂದೆ. ನಿ ಪಿ 8ರ ಖಾತೆಯು ನನ್ನಹೆಸರಿಗೆ 36 ಗುಂಟೆ ಮತ್ತು ಮಾದಪ್ಪನ ಹೆಸರಿಗೆ 26 ಗುಂಟೆ ಯಾವಾಗ ಖಾತೆಯಾಗಿದೆ ಎಂದರೆ 2008ರಲ್ಲಿ ನಮೂದು ಆಗಿದೆ.

ದಾವಾ ಐಟಂ ನಂಬರ್ 1 ಮತ್ತು 2 ಪುಟ್ಟನಂಜಪ್ಪನವರಿಗೆ ಭೂನ್ಯಾಯಮಂಡಳಿಯಿಂದ ಮಂಜೂರು ಆಗಿದ್ದವು. ಯಾವ ವರ್ಷದಲ್ಲಿ ಮಂಜೂರು ಆಗಿದ್ದವು ಎಂದು ನನಗೆ ಗೊತ್ತಿಲ್ಲ.

ಮಂಜೂರಾದಾಗ ನಾನು ಇನ್ನೂ ಹುಟ್ಟಿರಲಿಲ್ಲ. ಪುಟ್ಟನಂಜಪ್ಪನಿಗೆ ಆಸ್ತಿ ಬಂದಾಗ ಅವರ ಅಣ್ಣ ತಮ್ಮಂದಿರು ಜೊತೆ ಇದ್ದರು ಎಂದರೆ ಸರಿಯಲ್ಲ. ನನ್ನ ವಂಶವೃಕ್ಷದ ಪ್ರಕಾರ ನನ್ನ ತಾತ ಪುಟ್ಟನಂಜಪ್ಪನ ಹೆಸರು ಪುಟ್ಟಪ್ಪ ಎಂದರೆ ಸರಿ. ಅವರಿಗೆ 4 ಜನ ಮಕ್ಕಳು ಎಂದರೆ ಸರಿ. ಆ ಪೈಕಿ ಅಂಕಪ್ಪ ಮೃತಪಟ್ಟಿದ್ದಾರೆ. ಅವರ ನಂತರ ಪುಟ್ಟನಂಜಪ್ಪ ಹಿರಿಯ ಸದಸ್ಯರು ಎಂದರೆ ಸರಿ. ಅಂಕಪ್ಪನವರು ಮೃತಪಟ್ಟ ನಂತರ ಪುಟ್ಟನಂಜಪ್ಪನವರೇ ಮನೆಯ ವ್ಯವಹಾರ ನೋಡಿಕೊಳ್ಳುತ್ತಿದ್ದರು ಎಂದರೆ ನಮ್ಮ ಮನೆ ನೋಡಿಕೊಳ್ಳುತ್ತಿದ್ದರು ಎಲ್ಲಾ ಮನೆ ನೋಡಿಕೊಳ್ಳುತ್ತಿರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಪುಟ್ಟನಂಜಪ್ಪನವರು ಮನೆಯ ಹಿರಿಯ ಸದಸ್ಯನಾದ ಕಾರಣ 1 ಮತ್ತು 2ನೇ ಆಸ್ತಿಗಳು ಭೂ ನ್ಯಾಯಮಂಡಳಿಯಿಂದ ಅವರ ಹೆಸರಿಗೆ ಮಂಜೂರಾಗಿತ್ತು ಎಂದರೆ ಆಗಿದೆ ಆದರೆ ಭಾಗವಾದ ಆಧಾರದಲ್ಲಿ ಬಂದಿದೆ ಎಂದು ಸಾಕ್ಷಿ ನುಡಿಯುುತ್ತಾರೆ. ಭಾಗವಾದ ಬಗ್ಗೆ ವಿಭಾಗ ಪತ್ರ ಹಾಜರು ಮಾಡಿದ್ದೇನಾ ಎಂದರೆ ಹಾಜರು ಮಾಡಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪುಟ್ಟನಂಜಪ್ಪ ಮತ್ತು ಅವರ ಅಣ್ಣ ತಮ್ಮಂದಿರು ಒಟ್ಟುಕುಟುಂಬದಲ್ಲಿದ್ದಾಗಲೇ 1 ಮತ್ತು 2ನೇ ಆಸ್ತಿಗಳು ಭೂ ನ್ಯಾಯಮಂಡಳಿಯಿಂದ ಮಂಜೂರಾಗಿತ್ತು ಎಂದರೆ ಸರಿಯಲ್ಲ.

ನಿ ಪಿ 8ರ ಪ್ರಕಾರ ನನ್ನ ಹೆಸರಿಗೆ ಸರ್ವೆ ನಂಬರ್ 448 ರಲ್ಲಿ 36 ಗುಂಟೆ ಜಮೀನು ಯಾವ ಆಧಾರದಲ್ಲಿ ಖಾತೆ ಆಗಿದೆ ಎಂದರೆ ನನ್ನ ತಂದೆಗೆ ಹುಷಾರಿಲ್ಲದ ಕಾರಣ ಪುಟ್ಟನಂಜಪ್ಪನವರು ನನ್ನಹೆಸರಿಗೆ 1 ಎ 22 ಗುಂಟೆ ಖಾತೆ ಮಾಡಿದ್ದರು, 10 ಗುಂಟೆ ಖಾತೆ ಮಾಡಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಆ ಎರಡೂ ಆಸ್ತಿಗಳು ಈಗಲೂ ನನ್ನ ಹೆಸರಿಗೆ ಖಾತೆ ಇದೆಯಾ ಎಂದರೆ ಈಗ 1ನೇ ಪ್ರತಿವಾದಿ ಹೆಸರಿಗೆ ಇದೆ. ಮಾದಪ್ಪನ ಹೆಸರಿಗೆ ಎಷ್ಟು ಆಸ್ತಿ ಖಾತೆಯಾಗಿದೆ ಎಂದು ನನಗೆ ಗೊತ್ತಿಲ್ಲ. ನಿಪಿ 16 ರಲ್ಲಿ ಇರುವ ವಿಭಾಗಪತ್ರವನ್ನು ನಾನು ಹಾಜರು ಮಾಡಿಲ್ಲ.

ನನ್ನತಂದೆ ಹೆಸರು ಸೋಮಣ್ಣ. ಸರ್ವೆ ನಂಬರ್ 448ರ ಆಸ್ತಿ ಬಸವರಾಜಪ್ಪನವರ ತಂದೆ ಮಾದಪ್ಪ ಎಷ್ಟು ಎಕರೆ ಆಸ್ತಿಯಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸ್ವಾಧೀನದಲ್ಲಿ ನಾವೇ ಇದ್ದೇವೆ ಎಂದು ಸಾಕ್ಷಿ ನುಡಿಯುತ್ತಾರೆ. ನಿ ಪಿ 16ರಲ್ಲಿ ಸರ್ವೆ ನಂಬರ್ 448 ಗುರುಮಲ್ಲಪ್ಪ ಬಿನ್ ಸೋಮಣ್ಣ ರವರಿಂದ 26 ಗುಂಟೆ ಮಾದಪ್ಪ ಎನ್ನುವವರರಿಗೆ ವಿಭಾಗ ಪತ್ರದ ಮೂಲಕ ಖಾತೆ ಆಗಿದೆ ಎಂದು ಹಾಜರು ಮಾಡಿದ್ದೇನೆ ಎಂದರೆ ಅದು ಸುಳ್ಳು ಎಂದು ಸಾಕ್ಷಿ ನುಡಿಯುತ್ತಾರೆ. ನಿ ಪಿ 16 ರಲ್ಲಿ ಸರ್ವೆ ನಕ್ಷೆಯಲ್ಲಿ ಸರ್ವೆ ನಂಬರ್ 448 ರಲ್ಲಿ ಮಾದಪ್ಪ ಬಿನ್ ಲೇಮರಿಲಿಂಗಪ್ಪನ ಪುಟ್ಟಪ್ಪ ಎನ್ನುವವರು ಇದ್ದಾರೆ ಎಂದು ಹೇಳಿದೆ ಎಂದರೆ ಮಾದಪ್ಪ ಬಿನ್ ಲೇಮರಿಲಿಂಗಪ್ಪನ ಪುಟ್ಟಪ್ಪ ಎಂಬುವವರು ಪ್ರತಿವಾದಿಯ ತಂದೆ. ಸೋಮಣ್ಣನ ಮಗ ಗುರುಮಲ್ಲ ಎಂದರೆ ನಾನೇ. ನಿ ಪಿ 18ರ ನಕ್ಷೆಯಲ್ಲಿ ಸರ್ವೆ ನಂಬರ್ 448 ರ ಪೂರ್ವದ ಭಾಗಕ್ಕೆ ಸೋಮಣ್ಣನ ಮಗ ಗುರುಮಲ್ಲ ಸ್ವಾಧೀನದಲ್ಲಿದ್ದಾರೆ ಎಂದು ನಮೂದು ಇದೆ ಎಂದರೆ ಸರಿಯಲ್ಲ.

ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.

ಒ ಎಸ್ 68/2019 DW 2

ಇಂದು ದಿಃ21.06.2025ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ MJS ವಕೀಲರಿಂದಃ

ನಾನು ಇರುವ ಊರಿನಿಂದ ಜಮೀನಿಗೆ ಸುಮಾರು 12-13 ಕಿ ಮೀ ಅಂತರವಿದೆ. ಅಷ್ಟು ದೂರ ಬಂದು ಕರಾರು ಮಾಡಿಕೊಳ್ಳಲು ಕಾರಣ ಏನು ಎಂದರೆ ಅಲ್ಲಿ ನೀರಾವರಿ ವ್ಯವಸ್ಥೆ ಮತ್ತು ರಸ್ತೆ ವ್ಯವಸ್ಥೆ ಚೆನ್ನಾಗಿದೆ ಎಂದು ಖರೀದಿ ಮಾಡಿದ್ದೆವು. ಜಮೀನು ಕ್ರಯಕ್ಕೆ ಇದೆ ಎಂದು ನನಗೆ ಪ್ರತಿವಾದಿ ನನಗೆ ಹೇಳಿದ್ದರು. ಪ್ರತಿವಾದಿ ನನ್ನ ಸಂಬಂಧಿಕರಲ್ಲ ಆದರೆ ಒಂದೇ ಜನಾಂಗದವರು. ಪ್ರತಿವಾದಿ ನನ್ನ ಹತ್ತಿರದ ಸಂಬಂಧಿ ಎಂದರೆ ಸರಿಯಲ್ಲ. ಕರಾರು ನೆಪಮಾತ್ರದ ಕರಾರಾಗಿದ್ದು ವಾದಿಗೆ ತೊಂದರೆ ಕೊಡಬೇಕೆಂದು ಸುಳ್ಳು ಕರಾರು ಮಾಡಲಾಗಿದೆ ಎಂದರೆ ಸರಿಯಲ್ಲ. ಕರಾರು ಆಗುವ ಮೊದಲು ಎಂ ಆರ್, ಆರ್ ಟಿ ಸಿ, ಕಂದಾಯ ಪಟ್ಟ ಪುಸ್ತಕ, ಲೀಗಲ್ ಒಪಿನಿಯನ್ ಗಳನ್ನು ನೋಡಿದ್ದೆ. ಜಮೀನಿಗೆ ಸಂಬಂಧಿಸಿದ ಆಸ್ತಿಯ ಹಕ್ಕಿಗೆ ಸಂಬಂಧಿಸಿದ ಮೂಲ ಕ್ರಯಪತ್ರ, ದಾನಪತ್ರ ಇತ್ಯಾದಿ ಗಳನ್ನು ನೋಡಿದ್ದೆನಾ ಎಂದರೆ ನೋಡಿಲ್ಲ. ಮರಪ್ಪನ ಹೆಸರಿಗೆ ಆದ ಎಎಲ್ ಆರ್ ಆದ ದಾಖಲೆಯನ್ನು ತೋರಿಸಿದ್ದರು ಮತ್ತು ಅದನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ಆ ರೀತಿಯ ದಾಖಲೆ ನಿ ಡಿ 31ರಲ್ಲಿ ಮರಪ್ಪ ಬಿನ್ ನಿಂಗಣ್ಣ ಎಂದು ಇದೆ ಎಂದು ಸಾಕ್ಷಿ ನುಡಿಯುತ್ತಾರೆ. ಮರಪ್ಪ ಬಿನ್ ನಿಂಗಣ್ಣ ಎನ್ನುವವರು ಗ್ರಾಮದಲ್ಲಿ ಹಲವಾರು ಜನ ಇದ್ದಾರೆ ಎಂದರೆ ಸರಿಯಲ್ಲ.

ನನ್ನಪ್ರಮಾಣಪತ್ರದಲ್ಲಿ ಹೇಳಿರುವಂತೆ ಆಸ್ತಿಯ ಮೂಲ ದಾಖಲೆಗಳನ್ನು ನೋಡಿದ್ದು ನಂತರ ಕರಾರು ಮಾಡಿಸಿದ್ದೇನೆ ಎಂದು ಹೇಳಿದ್ದೇನೆ ಆದರೆ ಆ ದಾಖಲೆಗಳನ್ನು ಹಾಜರುಮಾಡಿಲ್ಲ ಎಂದರೆ ಸರಿಯಲ್ಲ. ಈ ಮೊದಲು ವಾದಿ ವಿಚಾರಣೆಯನ್ನು ನಾನು ತಿಳಿದುಕೊಂಡಿದ್ದೇನೆ. ವಾದಿ ಯಾವೆಲ್ಲಾ ದಾಖಲೆಗಳನ್ನು ಹಾಜರು ಮಾಡಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ವಾದಿಯ ಪೂರ್ವಜರು ಅರ್ಧ ದಾವಾ ಆಸ್ತಿಯನ್ನು ಮಾರಾಟ ಮಾಡಿ ಉಳಿದ ಅರ್ಧ ಭಾಗದಲ್ಲಿ ಇದ್ದಾರೆ ಎಂಬ ಬಗ್ಗೆ ದಾಖಲೆ ಹಾಜರು ಮಾಡಿದ ವಿಚಾರ ನನಗೆ ಗೊತ್ತಿಲ್ಲ.

ನಾನು ಕರಾರು ಮಾಡುವ ಮೊದಲು ಊರಿನಲ್ಲಿ ಅಕ್ಕಪಕ್ಕದಲ್ಲಿ ಕೇಳಿದ್ದೆ ನಂತರ ಕರಾರು ಮಾಡಿಕೊಂಡಿದ್ದೆ. ಆ ರೀತಿ ನಾನು ಕೇಳಿರುವುದಿಲ್ಲ ಮತ್ತು 1ನೇ ಪ್ರತಿವಾದಿ ನನಗೆ ಬಹಳ ಪರಿಚಯಸ್ಥನಾದ ಕಾರಣ ಸುಳ್ಳು ಕರಾರು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಕರಾರು ಮಾಡಿಕೊಟ್ಟ ಮರಪ್ಪ ಬಿನ್ ನಿಂಗಣ್ಣ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನನಗೆ ಕರಾರು

ಮಾಡಿಕೊಟ್ಟ ಮರಪ್ಪ ಬಿನ್ ನಿಂಗಣ್ಣನವರಿಗೆ ಯಾವುದೇ ಮಾಲಿಕತ್ವ ಮತ್ತು ಹಕ್ಕು ಇಲ್ಲದ ಕಾರಣ ನನ್ನ ಕರಾರು ಸಹ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

ನನಗೆ ರೂ.8ಲಕ್ಷಕ್ಕೆ ಕರಾರು ಆಗಿತ್ತು. ಅದರಲ್ಲಿ ಮುಂಗಡ ರೂ.4ಲಕ್ಷ ಕೊಟ್ಟಿದ್ದೆ. ಮುಂಗಡ ರೂ.4ಲಕ್ಷವನ್ನು ನಾನು ರೂ.2ಲಕ್ಷವನ್ನು ನಗದು ಮತ್ತು ರೂ.2ಲಕ್ಷವನ್ನು ಚೆಕ್ ರೂಪದಲ್ಲಿ ಕೊಟ್ಟಿದ್ದೆ. ರೂ.2ಲಕ್ಷವನ್ನು ಚೆಕ್ ರೂಪದಲ್ಲಿ ಕೊಟ್ಟ ಬಗ್ಗೆ ದಾಖಲೆ ಹಾಜರು ಮಾಡಬಹುದಾ ಎಂದರೆ ಅವಶ್ಯಕತೆ ಇದ್ದರೆ ಕೊಡುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನಿಂದ ಪ್ರತಿವಾದಿಗೆ ಯಾವುದೇ ಮುಂಗಡ ಹಣ ಪಾವತಿಯಾಗದಿದ್ದರೂ ಸಹ ವಾದಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.

ಇಂದು ದಿಃ 21.06.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನಾನು ನಾಗರಾಜುರವರನ್ನು ಮದುವೆ ಆದ ಎಂದು ದಿನಾಂಕ ಗೊತ್ತಿಲ್ಲ. ಆದರೆ ಅಂದಾಜು 30 ವರ್ಷಗಳ ಹಿಂದೆ ಮದುವೆ ಆಗಿದ್ದೆ. ಮದುವೆ ಆದ ತರುವಾಯದಿಂದ ಬಿಪಿಎಲ್ ಪಡಿತರ ಚೀಟಿ ಇದೆ. ದಾವಾ ಆಸ್ತಿಗಳನ್ನು ಒಟ್ಟು ಕುಟುಂಬದಲ್ಲಿ ಸಂಪಾದಿಸಿದ್ದೇವೆ ಎಂಬ ಬಗ್ಗೆ ದಾಖಲೆ ಕೊಟ್ಟಿದ್ದೇವೆ. ದಾವಾ ಆಸ್ತಿಗಳನ್ನು ಒಟ್ಟು ಕುಟುಂಬದಲ್ಲಿ ಸಂಪಾದಿಸಿದ್ದೇವೆ ಎಂಬ ಬಗ್ಗೆ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ದಿಃ03.03.2016ರಂದು ನನ್ನ ಮಾವ ಅಂಕಶೆಟ್ಟಿ 1ನೇ ಪ್ರತಿವಾದಿಗೆ ಕೊಟ್ಟ ದಾನಪತ್ರ, 1ನೇ ಪ್ರತಿವಾದಿಗೆ 6ನೇ ಪ್ರತಿವಾದಿಗೆ 29.09.2021ರಂದು ಕ್ರಯ ಮಾಡಿದ ವಿವರಗಳು ನನಗೆ ಗೊತ್ತು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಒಟ್ಟು ಎಂಟು ಮುಕ್ಕಾಲು (8 3/4)ಎಕರೆ ಇದೆ. ದಾವಾ ಆಸ್ತಿಗಳ ಸರ್ವೆ ನಂಬರ್ ಹೇಳಲು ನನಗೆ ಆಗುವುದಿಲ್ಲ.

ನಾನು ಹಾಜರು ಮಾಡಿದ ದಾಖಲೆಗಳು ಅಂಕಶೆಟ್ಟಿ ಯವರಿಗೆ ಸೇರಿದ ದಾಖಲೆಗಳಾಗಿದ್ದು ನಂತರ 1ನೇ ಪ್ರತಿವಾದಿಗೆ ಅಂಕಶೆಟ್ಟಿ ದಾನಕೊಟ್ಟ ದಾಖಲೆಗಳು ಎಂದರೆ ನನಗೆ ಗೊತ್ತಿಲ್ಲ. ಪಿತ್ರಾರ್ಜಿತ ಆಸ್ತಿಗಳಿಗೆ ಸಂಬಂಧಪಟ್ಟಂತೆ ನಾನು ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಪೊಲಿಸರಿಗೆ ದೂರು ಕೊಟ್ಟಿದ್ದೆ ಎನ್ನುವದು ಸೃಷ್ಟಿತ ದಾಖಲೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಗಂಡ ಒಟ್ಟು ಕುಟುಂಬದಿಂದ ಹಲವಾರು ವರ್ಷಗಳ ಹಿಂದೇಯೇ ಬೇರೆಯಾಗಿದ್ದೆ ಎಂದರೆ ಸರಿಯಲ್ಲ. ನಾನು ಒಟ್ಟು ಕುಟಂಬದಲ್ಲಿ ಇದ್ದೆ ಎಂಬ ಬಗ್ಗೆ ದಾಖಲೆ ಹಾಜರು ಮಾಡಿದ್ದೆನಾ ಎಂದರೆ ಎಲ್ಲವನ್ನು ಇಟ್ಟುಕೊಳ್ಳಲು ಸಾಧ್ಯವಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಆಸ್ತಿಯ ಜಂಟಿ ಸ್ವಾಧೀನದಲ್ಲಿದ್ದೇನೆ ಎಂಬ ಬಗ್ಗೆ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಮೇಲೆ ನನಗೆ ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಅಕ್ರಮ ಲಾಭ ಪಡೆಯಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿನುಡಿಯುತ್ತಿದ್ದೇನೆ ಎಂದೆರ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
sd/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.

| | | |
|---|---|---|
| RA | 14/2019 | ಪಿ.ಡಬ್ಲ್ಯೂ 1 |

ಇಂದು ದಿಃ 21.06.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ಮೇಲ್ಮನವಿದಾರರ ಪರ ವಕೀಲರಿಂದಃ

ನಾನು ನನ್ನ ಪ್ರಕರಣದ ಸಮರ್ಥನೆಗಾಗಿ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿದ್ದು, ಅವುಗಳನ್ನು ಈ ಕೆಳಗಿನಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿ ಪಿ 1 ಮತ್ತು 2 | ಜೆ ಎಸ್ ಎಸ್ ಆಸ್ಪತ್ರೆ ಯ ಹೊರರೋಗಿ ದಾಖಲೆಗಳು |
| ನಿ ಪಿ 3<br>ನಿ ಪಿ 4 | ಸಲಹಾ ಚೀಟಿಗಳು<br>ವೈದ್ಯಕೀಯ ಬಿಲ್ಲುಗಳು |
| ನಿ ಪಿ 5 | ಇ ಎಸ್ ಐ ಆಸ್ಪತ್ರೆ ಯ ಒಂದು ದಾಖಲೆ ಮತ್ತು ಡಿಸ್ಚಾರ್ಜ್ ಸಮ್ಮರಿಯ ನೋಟರಿ ಪ್ರತಿ |
| ನಿ ಪಿ 6 | ಪ್ರಯೋಗಾಲಯದ ವರದಿ |
| ನಿ ಪಿ 7 | ಕೇಸ್ ವರದಿ |
| ನಿ ಪಿ 8 | ಸಿ ಟಿ ಸ್ಕ್ಯಾನ್ ವರದಿ |
| ನಿ ಪಿ 9 | ನೋಟಿಫಿಕೇಶನ್ ನ ನೋಟರಿ ಪ್ರತಿ |
| ನಿ ಪಿ 10 | ಒ ಎಸ್ 429/8ರ ಡಿಕ್ರಿ ಮತ್ತು ತೀರ್ಪಿನ ದೃಢೀಕೃತ ನಕಲು |

ಪಾಟೀ ಸವಾಲಿಗೆ ಸಮಯ ಕೇಳಿದ್ದು ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್
ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ನಂಜನಗೂಡು.

| | | |
|---|---|---|
| OS | 111/2020 | ಡಿ .ಡಬ್ಲ್ಯೂ: 1 |

ಇಂದು ದಿ:21.06.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆ: ಪ್ರತಿ ವಾದಿಪರ ಶ್ರೀ ವಕೀಲರಿಂದ:

ನಾನು ನನ್ನ ಪ್ರಕರಣದ ಸಮರ್ಥನೆಗಾಗಿ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿದ್ದು, ಅವುಗಳನ್ನು ಈ ಕೆಳಗಿನಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿ ಡಿ 1 | ಸರ್ವೆ ನಂಬರ್ 528/1 ರ ಆರ್ ಟಿ ಸಿ |
| ನಿ ಡಿ 2 | ಸರ್ವೆ ನಂಬರ್ 528 ರ ಆರ್ ಟಿ ಸಿ ದೃಢೀಕೃತ ನಕಲು |
| ನಿ ಡಿ 3 | ಎಂ ಆರ್ ಪ್ರತಿ |
| ನಿ ಡಿ 4 | ಒ ಎಸ್ 567/2016ರ ದಾವೆಯ ದೃಢೀಕೃತ ನಕಲು |

ಪಾಟೀ ಸವಾಲಿಗೆ ಸಮಯ ಕೇಳಿದ್ದು ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-
ಹಿರಿಯ ಸಿವಿಲ್
ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ನಂಜನಗೂಡು.

| | | |
|---|---|---|
| OS | 122/2020 | ಪಿ.ಡಬ್ಲ್ಯೂ 1 |

ಇಂದು ದಿಃ 21.06.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ವಾದಿಪರ ವಕೀಲರಿಂದಃ

ನಾನು ನನ್ನ ಪ್ರಕರಣದ ಸಮರ್ಥನೆಗಾಗಿ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿದ್ದು, ಅವುಗಳನ್ನು ಈ ಕೆಳಗಿನಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿ ಪಿ 4 | ಸಾಕ್ಷಿಯ ತಾತನ ಮರಣ ಪ್ರಮಾಣ ಪತ್ರ |
| ನಿ ಪಿ 5 | ಸಾಕ್ಷಿಯ ಅಜ್ಜಿಯ ಮರಣ ಪ್ರಮಾಣ ಪತ್ರ |
| ನಿ ಪಿ 6 | ಸಾಕ್ಷಿಯ ತಂದೆಯ ಮರಣ ಪ್ರಮಾಣ ಪತ್ರ |
| ನಿ ಪಿ 7 | ಸಾಕ್ಷಿಯ ತಾಯಿಯ ಮರಣ ಪ್ರಮಾಣ ಪತ್ರ |
| ನಿ ಪಿ 8 | ಸಾಕ್ಷಿಯ ಚಿಕ್ಕಪ್ಪನ ಮರಣ ಪ್ರಮಾಣ ಪತ್ರ |
| ನಿ ಪಿ9 | ಸಾಕ್ಷಿಯ ಇನ್ನೊಬ್ಬ ಚಿಕ್ಕಪ್ಪನ ಮರಣ ಪ್ರಮಾಣ ಪತ್ರ |
| ನಿ ಪಿ10 | ಸರ್ವೆ ನಂಬರ್ 115/1ರ ಆರ್ ಟಿ ಸಿ |
| ನಿ ಪಿ11 | ಸರ್ವೆ ನಂಬರ್ 115/2ಎ ರ ಆರ್ ಟಿ ಸಿ |
| ನಿ ಪಿ12 | ಸರ್ವೆ ನಂಬರ್ 115/2ಬಿ ರ ಆರ್ ಟಿ ಸಿ |
| ನಿ ಪಿ13 | ಸರ್ವೆ ನಂಬರ್ 115/3 ಆರ್ ಟಿ ಸಿ |
| ನಿ ಪಿ14 | ಸರ್ವೆ ನಂಬರ್ 115/4 ರ ಆರ್ ಟಿ ಸಿ |
| ನಿ ಪಿ15 | ಸರ್ವೆ ನಂಬರ್ 115/19 ರ ಆರ್ ಟಿ ಸಿ |
| ನಿ ಪಿ16 | ಸರ್ವೆ ನಂಬರ್ 115/20 ರ ಆರ್ ಟಿ ಸಿ |
| ನಿ ಪಿ17 | ಸರ್ವೆ ನಂಬರ್ 115/21 ರ ಆರ್ ಟಿ ಸಿ |
| ನಿ ಪಿ18 | ಸರ್ವೆ ನಂಬರ್ 115/22 ರ ಆರ್ ಟಿ ಸಿ |
| ನಿ ಪಿ19 | 2 ಆಕಾರ ಬಂದ್ ನ ದೃಢೀಕೃತ ನಕಲು |
| ನಿ ಪಿ20 | ಸರ್ವೆ ನಂಬರ್ 115ರ ಮೂಲ ಸರ್ವೆ ಟಿಪ್ಪಣಿ ಪುಸ್ತಕ |

ಪಾಟೀ ಸವಾಲಿಗೆ ಸಮಯ ಕೇಳಿದ್ದು ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್
ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ನಂಜನಗೂಡು.